

ತೋರಿದ ಕರಾಮತ್ತನ್ನು ಮರೆಯಲು ಸಾಧ್ಯವಿಲ್ಲ. 2021ರಲ್ಲಿ ಚೆನ್ನೈನಲ್ಲಿ ಇಂಗ್ಲೆಂಡ್ ವಿರುದ್ಧ ಗಳಿಸಿದ 161 ರನ್ (231 ಎಸೆತ, 18 ಬೌಂಡರಿ, 2 ಸಿಕ್ಸರ್) ಅವರ ಅತ್ಯುತ್ಕೃಷ್ಟ ಇನಿಂಗ್ಸ್‌ಗಳಲ್ಲಿ ಒಂದು ಎಂದೇ ಪರಿಣತರು ವಿಶ್ಲೇಷಿಸುತ್ತಾರೆ. ತಂಡದ ಮೊತ್ತದ ಅರ್ಧದಷ್ಟನ್ನು ಅವರೇ ಆಗ ಗಳಿಸಿದ್ದರು.

ಕೊಹ್ಲಿ ಟೆಸ್ಟ್ ಕ್ರಿಕೆಟ್‌ನಲ್ಲಿ 9230 ರನ್ ಗಳಿಸಿದರು. ರೋಹಿತ್ 4,301 ರನ್ ಕಲೆಹಾಕಿದರು. 30 ಶತಕಗಳು ಕೊಹ್ಲಿ ಇನಿಂಗ್ಸ್‌ಗಳಲ್ಲಿ ಅಡಗಿವೆ. ರೋಹಿತ್ 12 ಶತಕಗಳನ್ನು ಮಾತ್ರ ಗಳಿಸಲು ಶಕ್ಯರಾದದ್ದು. ಸಚಿನ್ ತೆಂಡೂಲ್ಕರ್ 15,921 ಟೆಸ್ಟ್ ರನ್‌ಗಳನ್ನು ಕಲೆಹಾಕಲು 200 ಟೆಸ್ಟ್‌ಗಳನ್ನು ಆಡಿದ್ದರು. ಕೊಹ್ಲಿ ಆಡಲು ಸಾಧ್ಯವಾದದ್ದು 123 ಪಂದ್ಯಗಳನ್ನು ಮಾತ್ರ.

ಆಸ್ಟ್ರೇಲಿಯನ್ನರು ಕೊಹ್ಲಿಯಲ್ಲಿ ತಮ್ಮ ದೇಶದ ಆಕ್ರಮಣಕಾರಿ ಆಟಗಾರನ ಧೋರಣೆಯನ್ನು ಕಂಡಿದ್ದರು. ತಮ್ಮದೇ ದೇಶದವನು ತಮ್ಮ ವಿರುದ್ಧ ಆಡುತ್ತಿದ್ದಾನೆ ಎಂದೇ ಕೆಲವರು ಬಣ್ಣಿಸಿದ್ದರು. ಆದರೆ, ಕೊಹ್ಲಿ ಭಾರತದ ಫಿಟ್‌ನೆಸ್ ಬ್ರ್ಯಾಂಡ್. ಮನದ ಹೊಂಡಗಳ ಮೇಲೆ ಸಲೀಸಾಗಿ ಡಾಂಬರು ಹಾಕಿಕೊಂಡು ಬಂದವರು ಅವರು. ರೋಹಿತ್ ನಾಯಕನಾಗಿ ಅವರೊಟ್ಟಿಗೆ ನಿಂತು, ತೆಗೆದುಕೊಂಡ ಕೆಲವು ತೀರ್ಮಾನಗಳು ನೆನಪಿನಲ್ಲಿ ಅಚ್ಚೊತ್ತಿವೆ. ಇಬ್ಬರ ಉಪಸ್ಥಿತಿಯನ್ನು ಭಾರತ ಒಂದು ದಶದ ಸೆಲಬ್ರೇಟ್ ಮಾಡಿದ್ದಂತೂ ನಿಜ.

ಈಗ ಕ್ರಿಕೆಟ್‌ನ ನೊಗದ ಭಾರ ಜಾಸ್ತಿಯಾಗಿದೆ. ಕೊಹ್ಲಿ, ರೋಹಿತ್ ಇಬ್ಬರೂ ಸಚಿನ್ ಅವರಿಗಿಂತ ಭಿನ್ನವಾದ ಕ್ರಿಕೆಟ್ ಬದುಕನ್ನು ಅನುಭವಿಸಿದರು. ಏಕದಿನ ಪಂದ್ಯಗಳ ಜೊತೆಗೆ ಟ್ವೆಂಟಿ20, ಐಪಿಎಲ್ ಕ್ರಿಕೆಟ್‌ನ ಸೇರ್ಪಡೆ ಅವರಿಂದ ಹೆಚ್ಚನ್ನೇ ಬಯಸಿತು. ಹಿಂಡುತ್ತಾ ಹೋಯಿತು. ಒಂದು ಕಡೆ ಕೌಟುಂಬಿಕ ಜವಾಬ್ದಾರಿ, ಇನ್ನೊಂದು ಕಡೆ ಜನಪ್ರಿಯತೆಯ ಉಸಾಬರಿ ಕೂಡ ಅವರನ್ನು ಹೈರಾಣಾಗಿಸಿರಲಿಕ್ಕೆ ಸಾಕು.

ಇಂಗ್ಲೆಂಡ್‌ಗೆ ಹೋಗಿ ಆಡಿ ಮುಗಿಸಿ, ಆಮೇಲೆ ಇಬ್ಬರೂ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಬಹುದಾಗಿತ್ತು. ಆದರೆ, ಪರಿಸ್ಥಿತಿ ಅವರ ಪರವಾಗಿ ಇದ್ದಂತೆ ಇಲ್ಲ. ಆಸ್ಟ್ರೇಲಿಯಾ ನೆಲದಲ್ಲಿ ನಡೆದಿದ್ದ ಈ ಹಿಂದಿನ ಟೆಸ್ಟ್ ಸರಣಿಯಲ್ಲಿ ಇಬ್ಬರೂ ಅವುಡುಗಚ್ಚಿ ಆಡಲು ಆಗಿರಲಿಲ್ಲ. ಅದೊಂದು 'ಕಪ್ಪು ಪಟ್ಟಿ'ಯ ರೀತಿ ಅಂಟಿಕೊಂಡಿತು. ವೃತ್ತಿಬದುಕಿನ ಕೊನೆಯಲ್ಲಿ ಅಂತಹ ಕಹಿ ವಿದಾಯ ಯಾರಿಗೂ ಬೇಕಿರುವುದಿಲ್ಲ. ರೋಹಿತ್ ಅವರನ್ನು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ಚಿಂತಕರ ಚಾವಡಿ ಹೊರಗೆ ಕಳುಹಿಸಲು ಉತ್ಸುಕವಾಗಿದ್ದುದು ನಿಜ. ಆ ಒತ್ತಡದ ಅನುಭವ ತಮ್ಮ ಮನಕ್ಕೆ ನಾಟಕೂಡದು ಎಂದು ಕೊಹ್ಲಿ ನಿರ್ಧರಿಸಿದರೋ ಏನೋ?

ಐದು ಟೆಸ್ಟ್‌ಗಳ ಸರಣಿಯನ್ನು ಇಂಗ್ಲೆಂಡ್‌ನಲ್ಲಿ ಭಾರತ ಆಡಬೇಕಿದೆ. ಅದು ಮೂರು ಪಂದ್ಯಗಳ ಸರಣಿ ಆಗಿದ್ದಿದ್ದರೆ ಈ ಇಬ್ಬರೂ ಕ್ರಿಕೆಟಿಗರು ಹೋಗಿ, ಆಡಿ ಬರುತ್ತಿದ್ದರೋ ಏನೋ ಎಂದು ಸುನೀಲ್ ಗಾವಸ್ಕರ್ ಅಭಿಪ್ರಾಯಪಟ್ಟಿದ್ದಾರೆ. ಆರು ವಾರಗಳ ಕಾಲ ಐದು ಟೆಸ್ಟ್ ಪಂದ್ಯಗಳನ್ನು ಆಡಿ, ದಣಿಯುವಷ್ಟು ಚೈತನ್ಯದ ವಯಸ್ಸು ಇದು ಅಲ್ಲದೇ ಇರಬಹುದು. ಸಚಿನ್ ತೆಂಡೂಲ್ಕರ್ ಉಪಸ್ಥಿತಿಯಲ್ಲಿ ಭಾರತ ಏಕದಿನ ವಿಶ್ವಕಪ್ ಗೆದ್ದಾಗ, ಸಚಿನ್‌ರನ್ನು ವಿರಾಟ್ ಹೆಗಲ ಮೇಲೆ ಹೊತ್ತು ಮೆರವಣಿಗೆ ಮಾಡಿದ್ದರು. ಅಂತಹ ವಿದಾಯವೊಂದು ಕೊಹ್ಲಿ ಅವರಿಗೂ ಸಿಗಬೇಕಿತ್ತು. ಶುಭಮನ್ ಗಿಲ್ ಅಥವಾ ಯಶಸ್ವಿ ಜೈಸ್ವಾಲ್ ತರಹದ ಬಿಸಿರಕ್ತದ ಹುಡುಗರು ಅವರನ್ನು ಭುಜದ ಮೇಲೆ ಕೂರಿಸಿಕೊಂಡು ಸಾಗಬೇಕಿತ್ತು. ರೋಹಿತ್ ಅವರಿಗೂ ನಾಯಕನಾಗಿ ಅಂತಹ ಬೀಳ್ಕೊಡುಗೆ ಸಿಗಬೇಕಿತ್ತು.

ಕ್ರಿಕೆಟ್ ಜನಪ್ರಿಯತೆಯ ಕಾವಿನಲ್ಲಿ ಅಂತಹ ಭಾವುಕ ಕ್ಷಣಗಳೆಲ್ಲ ಈಗ ಸಿನಿಮೀಯವೋ ಏನೋ? ಭಾರತ ಕ್ರಿಕೆಟ್‌ನ ಎರಡು ಕಟ್ಟಾಳುಗಳು ದೀರ್ಘಾವಧಿ ಸಂಯಮದ ಆಟಕ್ಕೆ ಬೆನ್ನು ಮಾಡಿದ್ದಾರೆ. ಅವರ ಸ್ಥಾನಗಳನ್ನು ತುಂಬಬಲ್ಲ ನಿಸ್ಸೀಮರು ಯಾರೆಂಬ ನಿರೀಕ್ಷೆಯನ್ನು ತಲೆಗೆ ತುಂಬಿಕೊಳ್ಳುವುದನ್ನು ಬಿಟ್ಟು ಸದ್ಯಕ್ಕೆ ಬೇರೆ ದಾರಿ ಇಲ್ಲ.

ಮೈದಾನದಲ್ಲಿ ಎಲ್ಲರ ಸಂಭ್ರಮವೂ ತಮ್ಮದೇ ಎನ್ನುವಷ್ಟು ಚಿನಕುರುಳಿಯಂತೆ ಕಾಣುತ್ತಿದ್ದ ದಾಳಿಕೋರ ಕೊಹ್ಲಿ ಅನುಪಸ್ಥಿತಿ ಇಂಗ್ಲೆಂಡ್ ವೇಗಿಗಳಿಗೆ ಹೊಸ ಹುಮ್ಮಸ್ಸು ತರಬಹುದು. ರೋಹಿತ್ ಪುಲ್‌ಗಳ ಮನರಂಜನೆಯೂ ಇನ್ನು ಟೆಸ್ಟ್ ಕ್ರಿಕೆಟ್ ಮಟ್ಟಿಗೆ ನೆನಪು. ಇಷ್ಟಾಗಿಯೂ, ಆಟ ಇನ್ನೂ ಬಾಕಿ ಇದೆ. ಯಾಕೆಂದರೆ, ಏಕದಿನದ ಪಂದ್ಯಗಳಲ್ಲಿ ಇಬ್ಬರ ಮುಂದಿನ ಹೆಜ್ಜೆಗಳನ್ನು ಕಣ್ಣರಳಿಸಿಕೊಂಡು ನೋಡಬಹುದು.

ಪ್ರತಿಕ್ರಿಯಿಸಿ: feedback@sudha.co.in